ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಸುಬ್ರಮಣ್ಯನಗರ ವಾರ್ಡ್62ರಲ್ಲಿ
ದಿನಾಂಕ: 20-12-2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

ವಾರ್ಡ್ ಸಂಖ್ಯೆ-62 ಸುಬ್ರಮಣ್ಯನಗರ ಸಮಯ ಬೆಳಿಗ್ಗೆ 11:00 ಘಂಟೆಗೆ

ದಿನಾಂಕ: 20-12-2022 ರಂದು ವಾರ್ಡ್ ಸಂಖ್ಯೆ: 62ರ ಡಿಸಂಬರ್ ಮಾಹೆಯ ವಾರ್ಡ್ ಸಮಿತಿ ಸಭೆಯು ವಾರ್ಡ್ ಸದಸ್ಯರ ಕಛೇರಿ ಗರಡಿಮನೆ ಹಿಂಭಾಗದಲ್ಲಿ, ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ:62ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದು ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ತಿಳಿಸಲಾಯಿತು.

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- 13 ನೇ ಮುಖ್ಯರಸ್ತೆ 'ಇ' ಬ್ಲಾಕ್ ನಲ್ಲಿ ಕೆಲವು ಯುವಕರು ರಾತ್ರಿ ವೇಳೆ ಮಾದಕವಸ್ತು ಸೇವನೆ(ಡ್ರಗ್ಸ್) ಮಾಡಿಕೊಂಡು ಗಲಾಟೆ ಮಾಡುತ್ತಾರೆ ಎಂದು ಸ್ಥಳೀಯ ನಾಗರೀಕರದ ಅಮೃತ ಎಂಬುವವರು ಸಭೆಗೆ ತಿಳಿಸಿದರು ಇದಕ್ಕೆ ಸಭೆಯಲ್ಲಿ ಹಾಜರಿದ್ದ ಪೋಲಿಸ್ ಸಿಬ್ಬಂದಿಯವರು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.
- 13 ನೇ ಮುಖ್ಯರಸ್ತೆ 'ಇ' ಬ್ಲಾಕ್ ನಲ್ಲಿ tree branches cutting ಮಾಡಲು ಸ್ಥಳೀಯ ನಾಗರೀಕರದ ಅಮೃತ ಅವರು ಸಭೆಗೆ ತಿಳಿಸಿದರು ಇದಕ್ಕೆ ಸಭೆಯಲ್ಲಿ ಹಾಜರಿದ್ದ ಕಾರ್ಯದರ್ಶಿಗಳು ಸಂಬಂದಪಟ್ಟ ಇಲಾಖೆಗೆ ಪತ್ರ ಬರೆಯುವುದಾಗಿ ಸಭೆಗೆ ತಿಳಿಸಿದರು.
- ವಾರ್ಡ್‌ನಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು ಸಂಬಂದಪಟ್ಟ ಇಲಾಖೆಗೆ ಪತ್ರ ಬರೆಯಲು ಸ್ಥಳೀಯ ನಾಗರೀಕರು ಸಭೆಗೆ ಮನವಿ ಮಾಡಿದರು, ಇದಕ್ಕೆ ಕಾರ್ಯದರ್ಶಿಗಳು ಪತ್ರ ಬರೆಯುವುದಾಗಿ ಸಭೆಗೆ ತಿಳಿಸಿದರು.
- ಸುಬ್ರಮಣ್ಯನಗರ ಮುಖ್ಯರಸ್ತೆಯು ಬಿ.ಎಂ.ಟಿ.ಸಿ. ಬಸ್ ರೂಟ್ ಆಗಿರುವುದರಿಂದ ಸ್ಥಳೀಯ ನಾಗರೀಕರಿಗೆ ಅನುಕೂಲವಾಗುವಂತೆ ಹೆಚ್ಚುವರಿ ಬಿ.ಎಂ.ಟಿ.ಸಿ. ಬಸ್ ವ್ಯವಸ್ಥೆ ಮಾಡಿಕೊಡಲು ಸಂಬಂದಪಟ್ಟ ಇಲಾಖೆಗೆ ಪತ್ರ ಬರೆಯಲು ಕಮಿಟಿ ಸಭೆಗೆ ಹಾಜರಿದ್ದ ಸದಸ್ಯರುಗಳು ಮತ್ತು ಸ್ಥಳೀಯ ನಾಗರೀಕರುಗಳು ಸಭೆಗೆ ಮನವಿ ಮಾಡಿದರು, ಇದಕ್ಕೆ ಕಾರ್ಯದರ್ಶಿಗಳು ಸ್ಥಳೀಯ ನಾಗರೀಕರುಗಳ ಸಹಿ ಹೊಂದಿರುವ ಮನವಿ ಪತ್ರವನ್ನು ಸಭೆಗೆ ಸಲ್ಲಿಸಬೇಕಾಗಿ ಸೂಚಿಸಿದರು ಮತ್ತು ನೋಡಲ್‌ಅಧಿಕಾರಿ ರವರ ಜೊತೆ ಚರ್ಚಿಸಿ ಪತ್ರ ಬರೆಯುವುದಾಗಿ ಸಭೆಗೆ ತಿಳಿಸಿದರು.

**ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

Nagesh. S.B

ಕಾರ್ಯದರ್ಶಿಯವರು
ಸಹಾಯಕಅಭಿಯಂತರರು, ವಾರ್ಡ್-62
ಸುಬ್ರಮಣ್ಯನಗರ, ಮಲ್ಲೇಶ್ವರಂ ಉಪವಿಭಾಗ, ಬಿಬಿಎಂಪಿ

ನೋಡಲ್ ಅಧಿಕಾರಿ
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಮಲ್ಲೇಶ್ವರಂ ಉಪವಿಭಾಗ, ಬಿಬಿಎಂಪಿ,ಬೆಂಗಳೂರು